ಶಾಲೀನಳ ಶಾಲೆಯಿಂದ ಹೊರಬಿದ್ದ ಶ್ರುತಿಗೆ ನ್ಯೂಬರಿ ಸ್ಟ್ರೀಟಿನ ಗುಂಟ ಅಪ್ಪನ ನೆನಪಿನ ವಾಸನೆ ಎದ್ದೆದ್ದು ಬಂದಂತೆ ಹೊಟ್ಟೆ ತೊಳಸತೊಡಗಿತ್ತು. ಹುಳಿಯಿಡುವ ಹಿಟ್ಟಿನಂತೆ ಹುದುಗಿ ಹದಕ್ಕೆ ಬರುತಿರುವ ನಗರದ ನಾಭಿಯಿಂದೆದ್ದು ಬರುವ ಗುಳ್ಳೆಗಳಲ್ಲಿ ಸದಾ ಅಪ್ಪನ ಪರಿಮಳ ಹೊಮ್ಮಿ ಬಿಸಿಲ ಹೊತ್ತಲ್ಲಿ ಮತ್ತೇರಿದಂತೆ ಶ್ರುತಿಯ ಜೀವ ಹಿಂಡುತ್ತಿತ್ತು. ಬೆವರೊರೆಸಿಕೊಳ್ಳುತ್ತ 'ಕೂಸೇ ಯಕ್ಷಗಾನ ಮಾಡಕಾರೆ ಭರತನಾಟ್ಯ ಮಿಕ್ಸ್ ಮಾಡಡ' ಎನ್ನುತ್ತಾ ಅಪ್ಪ ತಿದ್ದುತ್ತಿದ್ದ ಹೆಜ್ಜೆಯ ನೆನಪಾಗುತ್ತಿತ್ತು. ಗಗನಚುಂಬಿ ಎಸೀ ರೂಮಿನ ಅದೇ ವಾಸನೆ ಅದೇ ತಣ್ಣನೆಯ ನಿರ್ಜೀವ ಗಾಳಿಯಲ್ಲಿ ಅಡಿಕೆ ಸಿಂಗಾರದ ಘಮ ಹುಡುಕುವಂತಾಗುತ್ತಿತ್ತು. ನಡುರಾತ್ರಿಗಳ ಚೆಂಡೆ ಸದ್ದಿಗೆ ಲಗುಲಗು ನಡಿ ಎನ್ನುತ್ತಾ ಹೆಜ್ಜೆ ಹಾಕುತ್ತ ಆಟದ ಟೆಂಟಿನ ಜಾಗಕ್ಕೆ ಬಂದರೆ ಕೊಡಿಸುವ ಒಂದು ಬತ್ತಾಸು, ಅಪ್ಪ ತನಗೊಂದು ಚಾ; ಅಲ್ಲಿಗೆ ಆಟ ಸುರುವಾಯಿತೆಂದೇ ಲೆಕ್ಕ. ಬಣ್ಣ ಬೆಳಕಿನ ನಡುವೆ ನಗುವ ಕೇಕೆ, ವಿಕಾರಗಳೆಲ್ಲ ತೂಕಡಿಕೆಯ ಜೊತೆ ಮಿಳಿತಗೊಂಡು ಅವಳು ನೋಡಿದ ಪ್ರಸಂಗ ಉಳಿದವರು ಹೇಳುವ ಕತೆಗಿಂತ ಪ್ರತಿಸಲ ವಿಭಿನ್ನ! ಮರುದಿನ ಹೊಸಹೆಜ್ಜೆಯ ಕಲಿಕೆ, ಮನೆಯಂಗಳದ ಚಿಟ್ಟೆಯೇ ರಂಗಸ್ಥಳ. ಶಾಸ್ತ್ರೋಕ್ತ ಆಟ ಕುಣಿಯಲು ಕಲಿತ ಅಪ್ಪ ಎಂದೂ ಮೇಳ ಎಲ್ಲ ಸೇರಿಕೊಂಡು ತಿರುಗಲಿಲ್ಲ. ಆದರೆ, ಊರೊಟ್ಟಿನ ಆಟಕ್ಕೆ ಮುಖ್ಯಪಾತ್ರಧಾರಿ. ಗದ್ದೆಮಾಡಿಕೊಂಡು ಇಲ್ಲ ಅಡಿಕೆ ಬೆಳೆದುಕೊಂಡು, ಮತ್ತೆ ಒಂದಿಷ್ಟು ಸಂಸಾರಗಳು ಪುರೋಹಿತ್ಯ ಮಾಡಿಕೊಂಡಿದ್ದ ಊರು ಅದು. ತನ್ನದೇ ಲೋಕದಲ್ಲಿ ತಿಂದುಂಡು ತೋಟಕ್ಕೆ ಹೋಗಿಬಂದು ಆಟ ನೋಡು, ಆಟ ಕುಣಿ, ಬೆಳಗಾಯ್ತು ಸಂಜೆಯಾಯ್ತು ಎಂಬಂತ ಏಕತಾನತೆಯ ಊರು. ಅಂಥಾ ಊರಿನಲ್ಲಿ, ಊರಿಗೆ ಅತೀ ಅಪರೂಪವಾದ ಕೆಲಸದಲ್ಲಿದ್ದದ್ದು ಅಪ್ಪ ಮಾತ್ರ. ಮಿಲಿಟರಿಯಲ್ಲಿದ್ದು ಬಂದವ, ಇನ್ನೂ ಕೂಡ ಆರ್ಮಿ ರಿಸರ್ವಿನಲ್ಲಿರುವವನೆಂಬ ಗತ್ತು ಬೇರೆ ಇತ್ತಾದ್ದರಿಂದ ರಾಮಚಂದ್ರ ಹೆಗಡೆ ಇಲ್ಲದೆ ಊರವರ ಆಟ ನಡೆಯದು. 'ಇರ ಒಬ್ಬ ಮಗ ನಾಲ್ಕೆಕರೆ ತೋಟ ಕಾಯಲಾಗ್ತಿಲ್ಲೇ ದೇಶ ಕಾಯಲ್ ಹೋಜಾ' ಎಂದು ಎಲ್ಲರೊಡನೆ ಹೇಳಿಕೊಂಡು ಓಡಾಡುತ್ತಿದ್ದ ಅಜ್ಜನ ಕಾಟ ತಡೆಯಲಾರದೆ ಮುಂಚಿತವಾಗಿ ನಿವೃತ್ತಿ ಪಡೆದುಕೊಂಡು ಬಂದಿದ್ದ. ಹಾಗೆಂದು ಸಂಪೂರ್ಣ ನಿವೃತ್ತಿಯೇನಲ್ಲ. ಆರ್ಮಿ ರಿಸರ್ವಿನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದ, ಅಗತ್ಯ ಬಿದ್ದಾಗ ಪುನಃ ಬರುವೆನೆಂಬ ವಾಗ್ದಾನವದು. ಸೇನೆ ಬಿಟ್ಟು ಬಂದರೂ ಅವನ ಕಣ್ಣು ಸಿಡಿಮದ್ದಿನೋಪಾದಿಯಲ್ಲಿ ಹೊಳೆಯುತ್ತಿದ್ದದ್ದು ಮಾತ್ರ ಯುದ್ಧದ ಕತೆಗಳನ್ನು ಹೇಳುವಾಗ. ಊರವರೆಲ್ಲ ಅಲ್ಲೆಲ್ಲ ಹ್ಯಾಂಗೋ, ಕವಾಯತೆಲ್ಲ ಬೆಳಗ್ಗೆ 4 ಗಂಟೆಗೆ ಎದ್ದು ಮಾಡವಡಾ, ಸಸ್ಯಾಹಾರೀ ಊಟನೆ ಸಿಗ್ತಿಲ್ಯಡ, ಹೀಗೆ ತಲೆಗೊಂದರಂತೆ ದಾರಿಯಲ್ಲಿ ಸಿಕ್ಕವರೆಲ್ಲ ಮೊದಮೊದಲು ಪ್ರಶ್ನೆ ಕೇಳುತ್ತಿದ್ದರೆ ಅಪ್ಪನ ವಿವರಣೆಯ ಗತ್ತು ಹೆಮ್ಮೆ ಬೇರೆಲ್ಲೂ ಕಂಡುಬರದು. ಆ ಬಗೆಯ ಗತ್ತು ಅವಾ ವೇಷ ಹಾಕಿದಾಗೊಮ್ಮೊಮ್ಮೆ ಕಾಣಿಸಿಕೊಳ್ಳುತ್ತಿತ್ತು. ಅಂದಿನ ರಾತ್ರಿಯ ಗಧಾಯುದ್ಧ ಪ್ರಸಂಗದ ಕೃಪಾಚಾರ್ಯ ತನ್ನದು. ತನ್ನ ಸಣ್ಣ ಪಾತ್ರ ಕೌರವನಾದ ಅಪ್ಪನೊಟ್ಟಿಗೆ! ಶ್ರುತಿಗೆ ಭಯವೂ ಹೆಮ್ಮೆಯೂ ಒಟ್ಟೊಟ್ಟಿಗೆ. ಭರ್ಜರಿ ಪ್ರಸಂಗದ ಅಪ್ಪನ ಕೌರವ ಎಂದಿಗಿಂತಲೂ ಹೆಚ್ಚೇ ಕಳೆಗಟ್ಟಿತ್ತು ಅವತ್ತು. ಎಂತ ಚಪ್ಪಾಳೆ,

